# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/ /2021-22 ದಿನಾಂಕ : 20/09/2021

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 20/09/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ರಘು, DETER Comitte Member
4. ಶ್ರೀ ಮುತ್ತುರಾಜು ಕೆ.ಪಿ, ಅರಣ್ಯ ವಲಯ
5. ಶ್ರೀ ನವೀನ್ ಕುಮಾರ್ ವಿ, ಸಹಾಯಕ ಅಭಿಯಂತರರು (ವಿದ್ಯುತ್)
6. ಶ್ರೀ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
7. ಶ್ರೀ ಲಕ್ಷ್ಮೀಕಾಂತ್, ಸಹಾಯಕ ಅಭಿಯಂತರರು, ಬೆಸ್ಕಾಂ
8. ಶ್ರೀ ನಂಜೇಗೌಡ, ತೆರಿಗೆ ಪರಿವೀಕ್ಷಕರು
9. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
10. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು.

ನೋಡೆಲ್ ಅಧಿಕಾರಿ ರವರು ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು

ಸೋಮಣ್ಣ ಗಾರ್ಡನ್‌ನಲ್ಲಿ ಬೆಸ್ಕಾಂ ವತಿಯಿಂದ ಯು.ಜಿ ಕೇಬಲ್ ಅಳವಡಿಸುವಾಗ ಕಾವೇರಿ ನೀರಿನ ಪೈಪ್ ಒಡೆದಿರುವುದರಿಂದ ನೀರಿನ ಸಮಸ್ಯ, ಜ್ಞಾನೇಶ್ವರಿ ಬಡಾವಣೆಯಲ್ಲಿ ಒಳಚರಂಡಿ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದ್ದು, ರಸ್ತೆ ಚಿಕ್ಕದಾಗಿರುವುದರಿಂದ ಟ್ರಾಫಿಕ್ ಸಮಸ್ಯ ತಲೆದೋರಿರುವುದರಿಂದ ಬೇಗ ಕಾಮಗಾರಿ ಪೂರ್ಣಗೊಳಿಸಲು, ರಾಜೀವ್ ಗಾಂಧಿ ಅಂಡರ್ ಪಾಸ್ ಹತ್ತಿರ ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿರುವುದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸರಿಪಡಿಸಲು, ಬಿ.ಇ.ಎಲ್ 6ನೇ ಬ್ಲಾಕ್‌ನಲ್ಲಿ ನೀರಿನ ಸಮಸ್ಯಯಿರುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ಇಲ್ಲಿಯವರೆವಿಗೂ ಬಗೆಹರಿಸಿರುವುದಿಲ್ಲವೆಂದು, ಕೆಂಪೇಗೌಡನಗರದಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲವೆಂದು ತಿಳಿಸಿದರು.
ಕ್ರಮ: ಸಅ, ಬಿ.ಡಬ್ಲ್ಯೂಎಸ್ಎಸ್‌ಬಿ ರವರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಎನ್.ಟಿ.ಐ ಲೇಔಟ್ ಮುಖ್ಯ ರಸ್ತೆ, ಜ್ಞಾನೇಶ್ವರಿ ಬಡಾವಣೆಯಲ್ಲಿ, ಬಿ.ಇ.ಎಲ್ 6ನೇ ಬ್ಲಾಕ್‌ನಲ್ಲಿ ಹಾಗೂ ರಾಜೀವ್‌ಗಾಂಧಿ ನಗರದಲ್ಲಿ ಮರದ ಕೊಂಬೆಗಳು ಬೀದಿ ದೀಪಗಳನ್ನು ಆವರಿಸಿಕೊಂಡಿರುವುದರಿಂದ ಮರದ ಕೊಂಬೆಗಳನ್ನು ಟ್ರಿಮ್ ಮಾಡಲು ಕೋರಿದರು ಹಾಗೂ ಮರಗಳಿಗೆ ಪೋಸ್ಟರ್‌ಗಳು ಹಾಗೂ ಕೇಬಲ್‌ಗಳನ್ನು ಅಳವಡಿಸಿರುವುದನ್ನು ತೆರವುಗೊಳಿಸಲು ಕೋರಿದರು.

ಕ್ರಮ: ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ

ಯು.ಜಿ ಕೇಬಲ್ ಅಳವಡಿಸಲು ವಾರ್ಡಿನ ಬಹುತೇಕ ಎಲ್ಲಾ ರಸ್ತೆಗಳನ್ನು ಕತ್ತರಿಸಿ ಹಾಗೆಯೇ ಬಿಟ್ಟಿರುವುದರಿಂದ ವಾಹನ ಸವಾರರಿಗ ಹಾಗೂ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ಕಾಮಗಾರಿಯನ್ನು ಬೇಗನೇ ಪೂರ್ಣಗೊಳಿಸಲು ಕೋರಿದರು.

ಕ್ರಮ: ಸಕಾಅ, ಬೆಸ್ಕಾಂ

ಬಿ.ಇ.ಎಲ್ ಲೇಔಟ್ 1ನೇ ಬ್ಲಾಕ್‌ನಲ್ಲಿ ಎಲ್ಲಾ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಕಸ ಗುಡಿಸುತ್ತಿರುವುದಿಲ್ಲ, ಹಾಗೂ ಹೆಚ್.ಎಂ.ಟಿ ಲೇಔಟ್ 7ನೇ ಬ್ಲಾಕ್‌ನಲ್ಲಿ ಸುಮಾರು 3 ತಿಂಗಳಿಂದ ಮುಖ್ಯ ರಸ್ತೆಯ ಕಸ ಗುಡಿಸುತ್ತಿರುವುದಿಲ್ಲ, ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಬ್ಲಾಕ್‌ಸ್ಪಾಟ್ ನಿರ್ಮಾಣವಾಗುತ್ತಿದ್ದು ಕೂಡಲೇ ತೆರವುಗೊಳಿಸಲು ಕೋರಿದರು.

ಕ್ರಮ: ಸ.ಕಾ.ಅ, ಘ.ತ್ಯಾ.ನಿ

ವಾರ್ಡಿನ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಆದಷ್ಟು ಬೇಗ ಮುಚ್ಚಲು ಕ್ರಮ ವಹಿಸಲು ಕೋರಿದರು, ದೇಶಬಂಧುನಗರದ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿ ಸ್ಥಗಿತಗೊಂಡಿದ್ದು ಬೇಗನೇ ಕಾಮಗಾರಿಯನ್ನು ಪೂರ್ಣಗೊಳಿಸಲು, ಕೆನರಾ ಬ್ಯಾಂಕ್ ಲೇಔಟ್, ವಿರೂಪಾಕ್ಷಪುರ ಮತ್ತು ಜಾಯ್ ಸ್ಕೂಲ್ ಹತ್ತಿರ ಕಲ್ವರ್ಟ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಹಾಗೂ ಜ್ಞಾನೇಶ್ವರಿ ಬಡಾವಣೆಯಲ್ಲಿ 300.00 ಮೀ. ಉದ್ದದ ಚರಂಡಿ ನಿರ್ಮಿಸಲು ಕೋರಿದರು.

ಕ್ರಮ: ಸಅ, ವಿಉವಿ

ನಂಜಪ್ಪ ಸರ್ಕಲ್‌ನಲ್ಲಿ ಸಂಚಾರ ಪೋಲೀಸ್ ವಿಭಾಗದಿಂದ ಟ್ರಾಫೀಕ್ ಸಿಗ್ನಲ್‌ಅನ್ನು ಹೊಸದಾಗಿ ಅಳವಡಿಸಲಾಗಿದ್ದು, ಯಾವುದೇ ಸಿಬ್ಬಂದಿ ಇಲ್ಲದೆ ಇರುವುದರಿಂದ ವಾಹನ ಸವಾರರು ಪರಿಗಣನೆಗೆ ತೆಗೆದುಕೊಳ್ಳದೆ ಇರುವುದರಿಂದ ಟ್ರಾಫಿಕ್ ಸಿಗ್ನಲ್ ಉಪಯೋಗವಿಲ್ಲದಂತಾಗಿರುತ್ತದೆ.

ಕ್ರಮ: ಸಂಚಾರಿ ಪೋಲೀಸ್ ಠಾಣೆ, ಯಲಹಂಕ

ನೋಡೆಲ್ ಅಧಿಕಾರಿಗಳು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ